**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 28-04-2026:**

**ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

47.ದಿನಾಂಕ 8-7-2014ರಂದು ಎಸ್ ಬಿ ಎಂ ಹಾಸನ ಶಾಖೆಯ ವ್ಯವಸ್ಥಾಪಕರಿಗೆ ಆರೋಪಿತರ ಉಳಿತಾಯ ಖಾತೆ ಸಂಖ್ಯೆ 54017162543 ಇದರ ಸ್ಟೇಟ್ಮೆಂಟನ್ನು ನೀಡುವಂತೆ ಮನವಿಯನ್ನು ನಿಪಿ-81ರಂತೆ ಸಲ್ಲಿಸಿರುತ್ತೇನೆ. ಸದರಿಯವರು 21-10-14 ರಂದು ಮಾಹಿತಿಯನ್ನು ನಿಪಿ-82ರ ಪತ್ರದೊಂದಿಗೆ ಸಲ್ಲಿಸಿರುತ್ತಾರೆ. ಸದರಿ ಸ್ಟೇಟ್ಮೆಂಟ್ ಈಗಾಗಲೇ ನಿಪಿ-76 ಎಂದು ಗುರುತಿಸಲ್ಪಟ್ಟಿರುತ್ತದೆ.

48.ಆರೋಪಿತರ ಪತ್ನಿ ಪದ್ಮಾವತಿ ರವರ ಬ್ಯಾಂಕ್ ಖಾತೆ ಸ್ಟೇಟ್ಮೆಂಟನ್ನು ನೀಡುವಂತೆ ಎಸ್ ಬಿ ಎಂ ಹಾಸನ ಶಾಖೆಯವರಿಗೆ ದಿನಾಂಕ 8-7-14 ರಂದು ಪತ್ರ ಬರೆದಿರುತ್ತೇನೆ. ಅದಕ್ಕೆ ಅವರು ನಿಪಿ-176ರಂತೆ ಮಾಹಿತಿಯನ್ನು ನೀಡಿರುತ್ತಾರೆ.

49.ದಿನಾಂಕ 6-1-14 ರಂದು ಕಾರ್ಪೊರೇಷನ್ ಬ್ಯಾಂಕ್ ವ್ಯವಸ್ಥಾಪಕರಿಗೆ ಪತ್ರ ಬರೆದು ಆರೋಪಿತರ ಮಗಳು ರಂಜಿತಾಳ ಉಳಿತಾಯ ಖಾತೆ ಸಂಖ್ಯೆ 017602ರ ಸ್ಟೇಟ್ಮೆಂಟನ್ನು ನೀಡುವಂತೆ ಕೇಳಿರುತ್ತೇನೆ, ಅದಕ್ಕೆ ಸದರಿಯವರು ನಿಪಿ-90ರ ಪತ್ರದೊಂದಿಗೆ ನಿಪಿ-91 ರಂತೆ ಮಾಹಿತಿಯನ್ನು ನೀಡಿರುತ್ತಾರೆ.

50.ದಿನಾಂಕ 6-1-14ರಂದು ಕಾರ್ಪೊರೇಷನ್ ಬ್ಯಾಂಕ್ ಹಾಸನ ಇದರ ವ್ಯವಸ್ಥಾಪಕರಿಗೆ ಆರೋಪಿತರ ಮಗಳು ವನಿತಾರವರ ಉಳಿತಾಯ ಖಾತೆ ಸಂಖ್ಯೆ 5470ರ ಸ್ಟೇಟ್ಮೆಂಟನ್ನು ನೀಡುವಂತೆ ನಿಪಿ-79ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು ನಿಪಿ-80ರ ಪತ್ರದೊಂದಿಗೆ ನಿಪಿ-175ರಂತೆ ಮಾಹಿತಿ ನೀಡಿರುತ್ತಾರೆ.

51.ದಿನಾಂಕ 7-6-14ರಂದು ಹಾಸನ ಮುಖ್ಯ ಅಂಚೆ ಕಛೇರಿಯ ಸೂಪರಿಂಟೆಂಡೆಂಟ್ ರವರಿಗೆ

ಪತ್ರ ಬರೆದು ಆರೋಪಿತರ ಹೆಂಡತಿ ಪದ್ಮಾವತಿರವರ ಹೆಸರಿನಲ್ಲಿರುವ ಎನ್ ಎಸ್ ಸಿ ಬಾಂಡ್ ಗಳ ಮಾಹಿತಿ ಕೇಳಿದ್ದೆನು. ಅವರು ನಿಪಿ-98 ಮತ್ತು 99ರ ಪ್ರಕಾರ ಮಾಹಿತಿ ನೀಡಿರುತ್ತಾರೆ.

52.ನಿಪಿ-95 ರಿಂದ 97 ರಂತೆ ಆರೋಪಿತರಿಗೆ ಸಂಬಂಧಿಸಿದಂತೆ ವಿಮಾ ಪಾಲಿಸಿ ಮಾಹಿತಿ ಪಡೆದಿರುತ್ತೇನೆ.

53.ದಿನಾಂಕ 6-6-14 ರಂದು ಜಿಲ್ಲಾ ವಿಮಾಧಿಕಾರಿಗಳು ಕೆಜಿಐಡಿ ಹಾಸನ ಇವರಿಗೆ ನಿಪಿ-100ರಂತೆ ಪತ್ರ ಬರೆದು ಆರೋಪಿತರು ಹೊಂದಿರುವ 5 ಕೆಜಿಐಡಿ ಪಾಲಿಸಿಯ ಬಗ್ಗೆ ಮಾಹಿತಿ ಕೇಳಿರುತ್ತೇನೆ. ಅದಕ್ಕೆ ಸದರಿ ಕಛೇರಿಯಿಂದ ನಿಪಿ- 101 ರಂತೆ ಮಾಹಿತಿ ನೀಡಿರುತ್ತಾರೆ.

54.ದಿನಾಂಕ 7-6-14 ರಂದು ಆರೋಪಿತರ ಪತ್ನಿ ಪದ್ಮಾವತಿರವರ ಹೆಸರಿನಲ್ಲಿರುವ ಎಫ್ ಡಿ ಸಂಖ್ಯೆ 1079033421000158 ಮತ್ತು 107903311000426ರ ಬಗ್ಗೆ ಮಾಹಿತಿ ಕೋರಿ ನಿಪಿ-102 ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು ನಿಪಿ-103 ರಂತೆ ಮಾಹಿತಿ ನೀಡಿರುತ್ತಾರೆ.

55.ದಿನಾಂಕ 7-6-14 ರಂದು ವ್ಯವಸ್ಥಾಪಕರು ಎಕ್ಸಿಸ್ ಬ್ಯಾಂಕ್ ಇವರಿಗೆ ಆರೋಪಿತರ ಪತ್ನಿರವರ ಹೆಸರಿನಲ್ಲಿರುವ ನಿಶ್ಚಿತ ಠೇವಣಿಯ ಬಗ್ಗೆ ಮಾಹಿತಿ ಕೋರಿ ನಿಪಿ-104 ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಅವರು ನಿಪಿ-105 ಮತ್ತು 106 ರಂತೆ ಮಾಹಿತಿ ನೀಡಿರುತ್ತಾರೆ.

56.ಆರೋಪಿತರ ಪತ್ನಿ ಪದ್ಮಾವತಿರವರ ಹೆಸರಿನಲ್ಲಿ ನೋಂದಣಿಯಾಗಿರುವ ದಸ್ತಾವೇಜುಗಳಿಗೆ ಪಾವತಿಸಿದ ಮುದ್ರಾಂಕ ಶುಲ್ಕ. ನೋಂದಣಿ ಶುಲ್ಕ ಇನ್ನಿತರ ಶುಲ್ಕಗಳ ಮಾಹಿತಿಯನ್ನು ನಿಪಿ-146 ಮತ್ತು ನಿಪಿ-147 ರಂತೆ ಸ್ವೀಕರಿಸಿರುತ್ತೇನೆ.

57.ದಿನಾಂಕ 25-11-13 ರಂದು ಯುಟಿಐ (ಎಕ್ಸಿಸ್) ಬ್ಯಾಂಕ್ ನ ವ್ಯವಸ್ಥಾಪಕರಿಂದ ಆರೋಪಿತರ ಪತ್ನಿಗೆ ಸಂಬಂಧಿಸಿದ ಬ್ಯಾಂಕ್ ಖಾತೆಯ ಸ್ಟೇಟ್ಮೆಂಟ್ಟನ್ನು ನಿಪಿ-88ರ ಪತ್ರದೊಂದಿಗೆ ನಿಪಿ-

89ರಂತೆ ಸ್ವೀಕರಿಸಿರುತ್ತೇನೆ.

58.ಆರೋಪಿತರ ಮಗ ಸುದರ್ಶನ್ ಗೆ ಸಂಬಂಧಿಸಿದ ಕಾರ್ಪೊರೇಷನ್ ಬ್ಯಾಂಕ್ ಖಾತೆಯ ಸ್ಟೇಟ್ಮೆಂಟನ್ನು ನಿಪಿ-72 ರ ಪತ್ರದೊಂದಿಗೆ ಮಾಹಿತಿಯನ್ನು ನಿಪಿ-73 ರಂತೆ ಚಾಸಾ-54 ರವರು ಸ್ವೀಕರಿಸಿರುತ್ತಾರೆ.

59.ದಿನಾಂಕ 30-10-14 ರಂದು ಮಾನ್ಯ ಅಪರ ಪೊಲೀಸ್ ಮಹಾನಿರ್ದೇಶಕರು ಕರ್ನಾಟಕ ಲೋಕಾಯುಕ್ತ ಬೆಂಗಳೂರು ಇವರಿಗೆ ಸಮುಚಿತ ಮಾರ್ಗದಲ್ಲಿ ಆರೋಪಿತರ ಕೌಟುಂಬಿಕ ವೆಚ್ಚದ ವರದಿಯನ್ನು ಜಂಟಿ ನಿರ್ದೇಶಕರು, ಅಂಕಿಅಂಶಗಳು, ಕರ್ನಾಟಕ ಲೋಕಾಯುಕ್ತ ರವರಿಂದ ತರಿಸಿಕೊಡುವಂತೆ ನಮೂನೆ-1 ಮತ್ತು 2 ರಲ್ಲಿ ಮಾಹಿತಿಯನ್ನು ಭರ್ತಿ ಮಾಡಿ ಕೋರಿಕೊಂಡಿರುತ್ತೇನೆ. ಅದಕ್ಕೆ ಸದರಿಯವರು ನಿಪಿ-108ರ ಪತ್ರದೊಂದಿಗೆ ನಿಪಿ-109ರಂತೆ ನೀಡಿದ ಮಾಹಿತಿಯನ್ನು ಸ್ವೀಕರಿಸಿರುತ್ತೇನೆ.

60.ದಿನಾಂಕ 28-3-14 ರಂದು ಮುಖ್ಯೋಪಾಧ್ಯಾಯರು, ಸಾವಿತ್ರಿ ಕಾನ್ವೆಂಟ್, ರವರಿಗೆ ಆರೋಪಿತರ ಮಗಳು ಕುಮಾರಿ ರಂಜಿತಾರವರ ವ್ಯಾಸಂಗದ ವಿವರ ಮತ್ತು ಖರ್ಚಿನ ಬಗ್ಗೆ ಮಾಹಿತಿ ಕೋರಿ **ನಿಪಿ-204** ರಂತೆ ಪತ್ರ ಬರೆದಿರುತ್ತೇನೆ.

61.ದಿನಾಂಕ 28-3-14 ರಂದು ಮುಖ್ಯೋಪಾಧ್ಯಾಯರು, ಸಾವಿತ್ರಿ ಕಾನ್ವೆಂಟ್, ರವರಿಗೆ ಆರೋಪಿತರ ಮಗ ಸುದರ್ಶನ್ ರವರ ವ್ಯಾಸಂಗದ ವಿವರ ಮತ್ತು ಖರ್ಚಿನ ಬಗ್ಗೆ ಮಾಹಿತಿ ಕೋರಿ **ನಿಪಿ-205** ರಂತೆ ಪತ್ರ ಬರೆದಿರುತ್ತೇನೆ.

62.ಸದರಿ ಮುಖ್ಯೋಪಾಧ್ಯಾಯರು **ನಿಪಿ-206** ರಂತೆ ಮಾಹಿತಿ ನೀಡಿದ್ದು ಸದರಿ ಮಾಹಿತಿಯಲ್ಲಿ ಸದರಿ ಕಾನ್ವೆಂಟ್ ನ ಮುಖ್ಯೋಪಾಧ್ಯಾಯರು ಸದರಿ ಶಾಲೆಯ ಮಾಲೀಕತ್ವವನ್ನು ನವೀನ್ ಎಂಬುವವರಿಗೆ ಸದರಿ ಮಾಹಿತಿ ಇಲ್ಲದೆ ನೀಡಿದ್ದು ಸಂಬಂಧಪಟ್ಟ ದಾಖಲೆಗಳು ಯಾವುದೂ ಇರುವುದಿಲ್ಲ

ಎಂದು ತಿಳಿಸಿರುತ್ತಾರೆ.

63.ದಿನಾಂಕ 28-3-14ರಂದು ಅಕ್ಷರ ಪಬ್ಲಿಕ್ ರೆಸಿಡೆನ್ಷಿಯಲ್ ಸ್ಕೂಲ್ ಆಲ್ದೂರು, ಚಿಕ್ಕಮಗಳೂರು ಇವರಿಗೆ ಆರೋಪಿತರ ಮಗ ಎಸ್ ಎಂ ಸುದರ್ಶನ್ ರವರು 2003-04 ಮತ್ತು 2004-05ನೇ ಸಾಲಿನಲ್ಲಿ ವ್ಯಾಸಂಗ ಮಾಡಿದ ಬಗ್ಗೆ ಮಾಹಿತಿ ನೀಡುವಂತೆ **ನಿಪಿ-207**ರಂತೆ ಪತ್ರ ಬರೆದಿರುತ್ತೇನೆ. ಸದರಿ ಶಾಲೆಯಿಂದ ಬಂದ ಮಾಹಿತಿಯನ್ನು **ನಿಪಿ-208** ರಂತೆ ಸ್ವೀಕರಿಸಿರುತ್ತೇನೆ.

64.ದಿನಾಂಕ 28-3-14ರಂದು ಮುಖ್ಯೋಪಾಧ್ಯಾಯರು ಚನ್ನಕೇಶವಸ್ವಾಮಿ ಬಾಲಿಕಾ ಪ್ರೌಢಶಾಲೆಯವರಿಗೆ ಆರೋಪಿತರ ಮಗಳು ರಂಜಿತಾ ಇವಳ ವ್ಯಾಸಂಗದ ವಿವರ ಮತ್ತು ಪಾವತಿಸಿದ ಫೀ ವಿವರ ಕೋರಿ **ನಿಪಿ-209** ರಂತೆ ಪತ್ರ ಬರೆದಿರುತ್ತೇನೆ. ಸದರಿಯವರು ದಿನಾಂಕ 2-4-14ರಂದು ನಿಪಿ-210ರ ಪತ್ರದೊಂದಿಗೆ ಮಾಹಿತಿ ನೀಡಿರುತ್ತಾರೆ. ಅದರೊಂದಿಗೆ ಇರುವ 3 ದಾಖಲೆಗಳನ್ನು ನೋಡುತ್ತಿದ್ದು ನಿಪಿ-210(1) ಎಂದು ಗುರುತಿಸಲಾಯಿತು.

65.ದಿನಾಂಕ 28-3-14ರಂದು ಪ್ರಾಂಶುಪಾಲರು ವೆಂಕಟೇಶ್ವರ ಪದವಿಪೂರ್ವ ಕಾಲೇಜು, ಹಾಸನ ಇವರಿಗೆ ಆರೋಪಿತರ ಮಗ ಸುದರ್ಶನ್ ರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-211** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-212** ರಂತೆ ಮಾಹಿತಿ ನೀಡಿರುತ್ತಾರೆ.

66.ದಿನಾಂಕ 28-3-14ರಂದು ಪ್ರಾಂಶುಪಾಲರು ವೆಂಕಟೇಶ್ವರ ಪದವಿಪೂರ್ವ ಕಾಲೇಜು, ಹಾಸನ ಇವರಿಗೆ ಆರೋಪಿತರ ಮಗಳು ವನಿತಾ ರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-213** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-214** ರಂತೆ ಮಾಹಿತಿ ನೀಡಿರುತ್ತಾರೆ.

67.ದಿನಾಂಕ 28-3-14ರಂದು ಪ್ರಾಂಶುಪಾಲರು ಸುಜಲಾ ಪದವಿಪೂರ್ವ ಕಾಲೇಜು, ಹಾಸನ ಇವರಿಗೆ ಆರೋಪಿತರ ಮಗಳು ವನಿತಾ ರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-215** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-216** ರಂತೆ ಮಾಹಿತಿ ನೀಡಿರುತ್ತಾರೆ.

68.ದಿನಾಂಕ 28-3-14ರಂದು ಪ್ರಾಂಶುಪಾಲರು ಸುಜಲಾ ಪದವಿಪೂರ್ವ ಕಾಲೇಜು, ಹಾಸನ ಇವರಿಗೆ ಆರೋಪಿತರ ಮಗಳು ರಂಜಿತಾರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-217** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-218** ರಂತೆ ಮಾಹಿತಿ ನೀಡಿರುತ್ತಾರೆ.

69.ದಿನಾಂಕ 28-3-14ರಂದು ಪ್ರಾಂಶುಪಾಲರು ಎನ್ ಡಿ ಆರ್ ಕೆ ಪ್ರಥಮಪೂರ್ವ ಕಾಲೇಜು, ಹಾಸನ ಇವರಿಗೆ ಆರೋಪಿತರ ಮಗ ಸುದರ್ಶನ್ ರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-219** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-220ರ** ಪತ್ರದೊಂದಿಗೆ ನೀಡಿದ ಮಾಹಿತಿಯನು ಸ್ವೀಕರಿಸಿದ್ದು ಆ ಮಾಹಿತಿಯನ್ನು **ನಿಪಿ-220(1)** ಎಂದು ಗುರುತಿಸಲಾಯಿತು.

70.ದಿನಾಂಕ 28-3-14ರಂದು ಪ್ರಾಂಶುಪಾಲರು ಕೃಷ್ಣಾ ಪದವಿಪೂರ್ವ ಕಾಲೇಜು, ಹಾಸನ ಇವರಿಗೆ ಆರೋಪಿತರ ಮಗ ಸುದರ್ಶನ್ ರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-221** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-222ರ** ಪತ್ರದೊಂದಿಗೆ ನೀಡಿದ ಮಾಹಿತಿಯನ್ನು ಸ್ವೀಕರಿಸಿದ್ದು ಆ ಮಾಹಿತಿಯನ್ನು **ನಿಪಿ-222(1) ಎಂದು ಗುರುತಿಸಲಾಯಿತು.**

**71.**ದಿನಾಂಕ 28-3-14ರಂದು ಪ್ರಾಂಶುಪಾಲರು Yagachi Institute of Technology ಹಾಸನ ಇವರಿಗೆ ಆರೋಪಿತರ ಮಗಳು ರಂಜಿತಾರವರ ವ್ಯಾಸಂಗದ ಬಗ್ಗೆ ಮಾಹಿತಿ ಕೋರಿ **ನಿಪಿ-223** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಎನ್ ಡಿ ಆರ್ ಕೆ institute ರವರು **ನಿಪಿ-224** ರ ಪತ್ರದೊಂದಿಗೆ ನೀಡಿದ ಮಾಹಿತಿಯನ್ನು **ನಿಪಿ-224(1)**ರಂತೆ ಸ್ವೀಕರಿಸಿರುತ್ತೇನೆ.

**72.**ದಿನಾಂಕ 07-11-14ರಂದು ತಾಲ್ಲೂಕು ಸಮಾಜಕಲ್ಯಾಣ ಅಧಿಕಾರಿಗಳಿಗೆ ಆರೋಪಿತರ ಮಗಳು ವನಿತಾರವರಿಗೆ ವ್ಯಾಸಂಗದ ಶುಲ್ಕವನ್ನು ಮರುಪಾವತಿಸಿದ ಬಗ್ಗೆ ಮಾಹಿತಿ ಕೋರಿ **ನಿಪಿ-225** ರಂತೆ ಪತ್ರ ಬರೆದಿರುತ್ತೇನೆ. ಅದಕ್ಕೆ ಸದರಿಯವರು **ನಿಪಿ-226ರ** ಪತ್ರದೊಂದಿಗೆ ನೀಡಿದ 2 ಪುಟಗಳ ಮಾಹಿತಿಯನ್ನು **ನಿಪಿ-226(1)** ರಂತೆ ಸ್ವೀಕರಿಸಿರುತ್ತೇನೆ.

73.ಆರೋಪಿತರು ನಿಪಿ-203 ರಲ್ಲಿ ಅನುಬಂಧ 17ರಲ್ಲಿ ತಮ್ಮ ಮಕ್ಕಳ ವಿದ್ಯಾಭ್ಯಾಸದ ಖರ್ಚುವೆಚ್ಚದ ಮಾಹಿತಿಯನ್ನು ಕೂಡ ನೀಡಿರುತ್ತಾರೆ. ಅದನ್ನು **ನಿಪಿ-203(2)** ಎಂದು ಗುರುತಿಸಲಾಯಿತು. ನಿಪಿ-203ನ್ನು 5-3-14 ರ ಪತ್ರದೊಂದಿಗೆ ಆರೋಪಿತರಿಂದ ಸ್ವೀಕರಿಸಿರುತ್ತೇನೆ. ಅದನ್ನು **ನಿಪಿ-203(3)** ಎಂದು ಗುರುತಿಸಲಾಯಿತು.

74.ಆರೋಪಿತರು ಹೊಂದಿದ್ದ ಹೋಂಡಾ ಆಕ್ಟಿವಾ ಸಂಖ್ಯೆ ಕೆಎ-13-ಡಬ್ಲ್ಯೂ-5674ಕ್ಕೆ ಸಂಬಂದಿಧಸಿದ ವಿಮಾ ವಿವರಗಳ ಮಾಹಿತಿಯನ್ನು ನ್ಯೂ ಇಂಡಿಯಾ ಅಷ್ಯೂರೆನ್ಸ್ ಕಂಪನಿಯಿಂದ ನಿಪಿ-133 ರಂತೆ ಸ್ವೀಕರಿಸಿರುತ್ತೇನೆ.

75.ದಿನಾಂಕ 4-4-14 ರಂದು ಸಮುಚಿತ ಮಾರ್ಗದಲ್ಲಿ commissioner of income tax office ಗೆ ಆರೋಪಿತರ ಮಗ ಸುದರ್ಶನ್, ಆರೋಪಿತರ ಹೆಂಡತಿ ಪದ್ಮಾವತಿ ಹಾಗೂ ಆರೋಪಿತರಿಗೆ ಸಂಬಂಧಿಸಿದಂದತೆ ಆದಾಯ ತೆರಿಗೆ ರಿಟರ್ನ್ಸ್ ಲಾಭ ನಷ್ಟ ಗಳ ಖಾತೆ, ಬ್ಯಾಲೆನ್ಸ್ ಶೀಟ್ ಇತ್ಯಾದಿ ಮಾಹಿತಿ ಕೋರಿ ನಿಪಿ-134 ರಿಂದ 136 ರಂತೆ ಪತ್ರ ಬರೆದಿರುತ್ತೇನೆ. ಆದಾಯತೆರಿಗೆ ಇಲಾಖೆಯಿಂದ ಲೋಕಾಯುಕ್ತ ಪೊಲೀಸ್ ಅಧೀಕ್ಷಕರಿಗೆ ನಿಪಿ-141 ರ ಪತ್ರದೊಂದಿಗೆ ನಿಪಿ-140ರ ದಾಖಲೆಗಳನ್ನು ಕಳುಹಿಸಿದ್ದು ಅದನ್ನು ನಾನು ಸ್ವೀಕರಿಸಿರುತ್ತೇನೆ.

76.ಸಂಗ್ರಹಿಸಿದ ದಾಖಲೆಗಳನ್ನು ಮತ್ತು ಆರೋಪಿತರ ಅನುಬಂಧದ ಮಾಹಿತಿಯನ್ನು ಎ ಬಿ ಸಿ ಡಿ ಎಂದು 4 ಭಾಗಗಳಾಗಿ ತನಿಖೆಗಾಗಿ ವಿಂಗಡಿಸಿಕೊಂಡಿರುತ್ತೇನೆ. ಆರೋಪಿತರ ಆದಾಯ, ಖರ್ಚು, ಆಸ್ತಿ ಮತ್ತು ಚೆಕ್ ಅವಧಿಗಿಂತ ಹಿಂದೆ ಅವರ ಆದಾಯ ಇತ್ಯಾದಿ ಬಗ್ಗೆ ತನಿಖೆ ನಡೆಸಲು ಎ ಬಿ ಸಿ ಡಿ ಎಂದು ನಾಲ್ಕು ಭಾಗಗಳಾಗಿ ವಿಂಗಡಿಸಿಕೊಂಡಿರುತ್ತೇನೆ.

77.ಎ ವಿಭಾಗದಲ್ಲಿ ಆರೋಪಿತರ ಚೆಕ್ ಅವಧಿಗಿಂತ ಹಿಂದೆ ಯಾವುದೇ ಆದಾಯಇರುವುದು ಕಂಡುಬಂದಿರುವುದಿಲ್ಲ.

78.ಬಿ ವಿಭಾಗ ಚರ ಮತ್ತು ಸ್ಥಿರ ಆಸ್ತಿಗೆ ಸಂಬಂಧಪಟ್ಟದ್ದಾಗಿರುತ್ತದೆ. ಹಾಸನ ನಗರದ ಕುವೆಂಪುನಗರದ ವಾರ್ಡ್ ನಂಬರ್ 4 ರಲ್ಲಿರುವ ಮನೆ ಎಲ್ ಐ ಜಿ 2014 ರಲ್ಲಿ ಇರುವ 30 ಇಂಟು 50 ಅಡಿ ಅಳತೆಯ ನಿವೇಶನ ಮತ್ತು ಸದರಿ ನಿವೇಶನದಲ್ಲಿರುವ 30 ಇಂಟು 20 ಅಡಿ ವಿಸ್ತೀರ್ಣದ ಆರ್ ಸಿ ಸಿ ಮನೆಯನ್ನು ಜಿ ಎಂ ರಾಮೇಗೌಡ ಬಿನ್ ಲೇಟ್ ಮಲ್ಲೇಗೌಡರಿಂದ ಖರೀದಿಸಿರುತ್ತಾರೆ. ಸದರಿ ಆಸ್ತಿಗೆ ಸಂಬಂಧಪಟ್ಟಂತೆ ಹಿರಿಯ ಉಪನೋಂದಣಾಧಿಕಾರಿಗಳಿಂದ ನಿಪಿ-66ರಂತೆ ಮಾಹಿತಿಯನ್ನು ಹಾಗೂ ನಿಪಿ-68ರಂತೆ ಕ್ರಯಪತ್ರದ ದೃಢೀಕೃತ ನಕಲನ್ನು ಸ್ವೀಕರಿಸಿರುತ್ತೇನೆ. ಅದರಂತೆ ಕ್ರಯದ ಮೊಬಲಗು 7,30,000ರೂಪಾಯಿಯನ್ನು ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

79.ಹಾಸನ ನಗರ ಚನ್ನಪಟ್ಟಣ ಬಡಾವಣೆ ಕೆ ಹೆಚ್ ಬಿ ಕಾಲೋನಿಯಲ್ಲಿ ಆರೋಪಿತರು ಕರ್ನಾಟಕ ಗೃಹಮಂಡಳಿಯಿಂದ ತನ್ನ ಹೆಂಡತಿ ಪದ್ಮಾವತಿ ಹೆಸರಿನಲ್ಲಿ ಖರೀದಿಸಿರುವ ನಿವೇಶನ ಸಂಖ್ಯೆ 1442 ಎಂ ಐ ಜಿ 30 ಇಂಟು 50 ಅಡಿ ನಿವೇಶನಕ್ಕೆ ಸಂಬಂಧಿಸಿದಂತೆ ಹಿರಿಯ ಉಪನೋಂದಣಾಧಿಕಾರಿಗಳಿಂದ ನಿಪಿ-69ರಂತೆ ಕ್ರಯಪತ್ರದ ದೃಢೀಕೃತ ನಕಲುಗಳನ್ನು ಪಡೆದಿರುತ್ತೇನೆ. ಅದರಲ್ಲಿ ಕಾಣಿಸಿದ ಕ್ರಯದ ಮೊಬಲಗು, 7,99,227ನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಲಾಗಿದೆ. ಸದರಿ ನಿವೇಶನದಲ್ಲಿ ಕಟ್ಟುತ್ತಿರುವ 4 ಅಂತಸ್ತಿನ ಮನೆಯ ಮೌಲ್ಯಮಾಪನ ವರದಿಯನ್ನು ನಿಪಿ-65 ರಂತೆ ಸ್ವೀಕರಿಸಿರುತ್ತೇನೆ. ಆ ಮೌಲ್ಯಮಾಪನದ ಸಂಪೂರ್ಣ ಮಾಹಿತಿಯನ್ನು ಪಡೆದಿದ್ದು ಅದನ್ನು ಈಗ ನೋಡುತ್ತಿದ್ದು **ನಿಪಿ-227** ಎಂದು ಗುರುತಿಸಲಾಯಿತು. ಅದರಂತೆ ಆ ಕಟ್ಟಡದ ಒಟ್ಟು ಮೌಲ್ಯ 46,04,709ರೂಪಾಯಿ ಆಗಿದ್ದು ಅದನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಲಾಗಿದೆ.

80.ಹಾಸನ ನಗರದ ಕುವೆಂಪು ಬಡಾವಣೆ 2ನೇ ಹಂತ ಬಿ ಟಿ ಅಡ್ಡರಸ್ತೆಯಲ್ಲಿ ಆರೋಪಿತರು ಖರೀದಿಸಿದ ಮನೆ ಸಂಖ್ಯೆ 3 ಬಿ ಎಲ್ ಐ ಜಿ 2 ಸಂಬಂಧಿಸಿದ ಕ್ರಯಪತ್ರವನ್ನು ಉಪನೋಂದಣಾಧಿಕಾರಿಗಳಿಂದ ನಿಪಿ-67ರಂತೆ ಪಡೆದಿರುತ್ತೇನೆ. ಅದರಲ್ಲಿ ಕಾಣಿಸಿದ ಕ್ರಯದ ಪ್ರತಿಫಲ 1,27,300ನ್ನು ಆರೋಪಿತರ ಆಸ್ತಿಗೆ ಪರಿಗಣಿಸಲಾಗಿದೆ.

(ಈ ಹಂತದಲ್ಲಿ ನ್ಯಾಯಾಲಯದ ಬೆಳಗಿನ ಕಲಾಪದ ವೇಳೆ ಮುಗಿದಿದ್ದರಿಂದ ಮಧ್ಯಾಹ್ನಕ್ಕೆ

ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**

**<u>ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋಧಿಸಿದೆಃ</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ</u>**

81.ನಿಪಿ-194 ರಲ್ಲಿ ಕಾಣಿಸಿರುವ ಅಂತಿಮ ಹಣ 58,544 ರೂಪಾಯಿಗಳನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

82.ಆರೋಪಿತರ ಹೆಂಡತಿ ಪದ್ಮಾವತಿರವರ ಆಕ್ಸಿಸ್ ಬ್ಯಾಂಕಿನ ಖಾತೆ ಸಂಖ್ಯೆ 203010100050768 ರಲ್ಲಿ ದಿನಾಂಕ 19-7-13 ರ ಅಂತ್ಯಕ್ಕೆ ಇದ್ದಂತಹ 6340.31 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ. ಇದು ನಿಪಿ-89ರಲ್ಲಿ ಕಂಡುಬರುತ್ತದೆ.

83.ನಿಪಿ-77(1)ರಲ್ಲಿ ದಿಃ30-6-13 ಕ್ಕೆ ಕಾಣಿಸಿರುವ 6950.36 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

84.ನಿಪಿ-91 ರಲ್ಲಿ ದಿನಾಂಕ 18-4-13ಕ್ಕೆ ಕಾಣಿಸಿರುವ 5500 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

85.ನಿಪಿ-177ರಲ್ಲಿ ದಿನಾಂಕ 22-7-13ಕ್ಕೆ ಕಾಣಿಸಿರುವ 7785 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

86.ನಿಪಿ-73ರಲ್ಲಿ ದಿನಾಂಕ 13-7-13ಕ್ಕೆ ಕಾಣಿಸಿರುವ 3989 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

87.ನಿಪಿ-76ರಲ್ಲಿ ದಿನಾಂಕ 24-7-13ಕ್ಕೆ ಕಾಣಿಸಿರುವ 583.77 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

88.ನಿಪಿ-176ರಲ್ಲಿ ದಿನಾಂಕ 16-7-13ಕ್ಕೆ ಕಾಣಿಸಿರುವ 99346.62 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

89.ನಿಪಿ-106ರಲ್ಲಿ ಕಾಣಿಸಿರುವ ಅನಿಲ ಸಂಪರ್ಕ ಪಡೆಯಲು ಪಾವತಿಸಿರುವ 1400 ರೂಪಾಯಿಯನ್ನು ಆರೋಪಿತರ ಆಸ್ತಿ ಲೆಕ್ಕಕ್ಕೆ ಪರಿಗಣಿಸಿರುತ್ತೇನೆ.

(ಮುಂದುವರದ ಮುಖ್ಯವಿಚಾರಣೆಯನ್ನು ಮುಂದೂಡಲಾಗಿದೆ)

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**